'ಓ....ಯಾವ ಸೀಮೆ ಡಾಕ್ಟ್ರೋ ಇವ್ನು, ನೀನು ಇಂಜೆಕ್ಷನ್ ಚುಚ್ಚೋಕೆ ಬಂದ್ರೆ ಪೇಷಂಟ್ ಕಥೆ ಗೋವಿಂದ.. ಗೋವಿಂದ...' ಋತುವೂ ಸೋಲುತ್ತಿರಲಿಲ್ಲ.

ಎಲ್ಲರ ಶುಭ ಹಾರೈಕೆಗಳೊಂದಿಗೆ ಭರತ ಹೊರಟು ನಿಂತ. ಪುರುಷೋತ್ತಮರೇ ಅವನ ಜೊತೆ ಹೋಗಿ ಕಾಲೇಜಿನ ಪ್ರವೇಶದ ವಿಧಿ ವಿಧಾನಗಳನ್ನೆಲ್ಲಾ ಮುಗಿಸಿ ಹಾಸ್ಟೆಲ್ಲಿನಲ್ಲಿ ಮಗನನ್ನು ಸೇರಿಸಿ ಹಿಂದಿರುಗಿದ್ದರು. ಮಗ ಸಮರ್ಥ ವೈದ್ಯನಾಗಿ ಜನಸೇವೆ ಮಾಡಿದರೆ ತಮ್ಮ ಬದುಕೂ ಸಾರ್ಥಕವಾದಂತಾಗುತ್ತದೆ. ಅವರು ಎಷ್ಟೆಲ್ಲಾ ಕನಸುಗಳನ್ನು ಮಗನ ಮೇಲಿಟ್ಟಿದ್ದರು. ಆದರೆ ಎಲ್ಲದಕ್ಕೂ ಹದಿನೈದೇ ದಿನಗಳಲ್ಲಿ ತೆರೆ ಬಿದ್ದಿತ್ತು!

ಒಂದು ದಿನ ಬಂಗಲೆಗೆ ಹಿಂದಿರುಗಿದ ಭರತ ಮತ್ತೆಂದೂ ಕಾಲೇಜಿಗೆ ಹೋಗಲಿಲ್ಲ. ಅಷ್ಟೇ ಅಲ್ಲ ಏನೋ ಕಳೆದುಕೊಂಡವನಂತೆ ಮಂಕು ಹಿಡಿದು ಕುಳಿತುಬಿಟ್ಟ. ಅಷ್ಟು ಚೂಟಿಯಾಗಿದ್ದ ಹುಡುಗ ಇವನೇ ಏನು ಎನ್ನುವಷ್ಟು ಬದಲಾದ. ಖ್ಯಾತ ಮನೋವೈದ್ಯರಿಂದ ಚಿಕಿತ್ಸೆಯಾಯಿತು. ಮಾಟ ಮಂತ್ರಹರಣ ಪ್ರಯೋಗವೂ ಆಯಿತು. ಆದರೂ ಭರತ ಬದಲಾಗಲಿಲ್ಲ. ಬಳ್ಳಾರಿಯ ಕಾಲೇಜಿಗೆ ಹೋಗಿ ಏನಾದರೂ ವಿಷಯ ನಡೆದಿರಬಹುದೆಂದು ವಿಚಾರಿಸಿದಾಗ ಅಲ್ಲೂ ಏನೂ ತಿಳಿಯಲಿಲ್ಲ. ದಿನದಿಂದ ದಿನಕ್ಕೆ ಮೌನಿಯಾಗುತ್ತಲೇ ಹೋದ ಭರತ.

ಈಗ ಎರಡು ವರ್ಷಗಳಿಂದ ಅವನು ಹೀಗೆಯೇ ಇದ್ದಾನೆ. ಎಲ್ಲಾ ಸರಿಯಾಗಿದ್ದರೆ ಮೆಡಿಕಲ್ ಓದಬೇಕಾಗಿದ್ದವನು ಈಗ ಸಮಸ್ಯೆಯಾಗಿ ಕುಳಿತು ಬಿಟ್ಟಿದ್ದಾನೆ. ತನಗೆ ಬೇಕೆನಿಸಿದರೆ ಮಾತುಗಳಿಗೆ ಪ್ರತಿಕ್ರಿಯಿಸುತ್ತಾನೆ. ಇಲ್ಲದಿದ್ದರೆ ತನಗೆ ಸಂಬಂಧವೇ ಇಲ್ಲದಂತೆ ಇದ್ದುಬಿಡುತ್ತಾನೆ.

ನಿಶ್ಯಬ್ದವೆಂದರೆ ಹೆದರುವ ಋತುವಿಗೆ ಸುಂದರಿಯಂತೆ ಭರತನ ಈ ಮೌನವೂ ಒಮ್ಮೊಮ್ಮೆ ಬೆಚ್ಚಿ ಬೀಳಿಸುತ್ತದೆ. ಚಿಕ್ಕಮ್ಮನ ಮಾತುಗಳು, ತಂದೆಯ ವಾತ್ಸಲ್ಯ, ಬಂಗಲೆಯ ಹಕ್ಕಿಗಳ ಚಿಲಿಪಿಲಿ ಇದ್ದುದರಲ್ಲಿ ಅವಳನ್ನು ಸಂತೋಷವಾಗಿಟ್ಟಿವೆ.

'ಋತು, ನಂದು ತಿಂಡಿ ಆಯ್ತು, ನೀನಿನ್ನೂ ಬೆರಳಾಡಿಸುತ್ತಲೇ ಇದ್ದಿ ನೋಡು....' ತಂದೆ ಎಚ್ಚರಿಸಿದಾಗ ತನ್ನ ಗುಂಗಿನಿಂದ ಹೊರಬಂದಳು.

'ನೋಡು ಋತು, ಭರತನ ಕಥೆಯಂತೂ ಹಾಗಾಯ್ತು, ನಾವು ಹೆತ್ತವರು ಎಷ್ಟು ದಿನ ನಿನ್ನ ಕಾಳಜಿ ಮಾಡೋಕೆ ಆಗುತ್ತೆ ಹೇಳು, ನೀನು ಪ್ರತೀ ವರ್ಷ ಮದುವೆಯನ್ನೂ ಮುಂದೂಡುತ್ತಲೇ ಬರ್ತಿದ್ದಿ, ನಿಂಗೂ ಸಂಕ್ರಾಂತಿಗೆ 28 ವರ್ಷ ತುಂಬುತ್ತದೆ. ಇನ್ನಾದ್ರೂ ನಿನ್ನ ಭವಿಷ್ಯದ ಬಗ್ಗೆ ಯೋಚಿಸ್ಬೇಕು ಅಲ್ವಾ, ಈ ಸಲ ಯುಗಾದಿಯ ಸಮಯಕ್ಕೆ ತಕ್ಕ ಹುಡುಗನ್ನು ಹುಡುಕಿ ನಿಂಗೆ ಮದ್ವೆ ಮಾಡೋದೇ, ನಿನ್ನ ಯಾವ ಕಾರಣವನ್ನೂ ನಾನು ಕೇಳಲ್ಲ....'

ತಂದೆಯ ಮಾತುಗಳಲ್ಲಿ ನಿರ್ಧಾರವಿದ್ದುದನ್ನು ಗಮನಿಸಿದ ಋತು ಬೆಚ್ಚಿದಳು.

ಇದು ಸಾಧ್ಯವೇ? ಹೇಮಂತನನ್ನು ಮರೆತು ತಾನು ಇನ್ನೊಬ್ಬನನ್ನು ಮದುವೆಯಾಗಬೇಕೇ? ಹೇಮಂತನ ನೆನಪು ಮನದೊಳಕ್ಕೆ ಫಕ್ಕನೆ ಮಿಂಚಿ ಮರೆಯಾಗುವ ಹೊತ್ತಿಗೆ ಯಾರೋ ಕಾಲಿಂಗ್ ಬೆಲ್ಲನ್ನು ಒತ್ತಿದ್ದರು.

ಬಂದವರು ಯಾರಿರಬಹುದು? ಅಪ್ಪನ ಕಕ್ಷೀದಾರರಿರಬಹುದೇ? ಒಮ್ಮೊಮ್ಮೆ ಕೇಸಿನ ವಿಷಯವಾಗಿ ಭಾನುವಾರವೂ ಕೂಡಾ ಪುರುಷೋತ್ತಮರನ್ನು ಹುಡುಕಿಕೊಂಡು ಬರುವುದಿತ್ತು. ಅವರೊಂದಿಗೆ ವ್ಯವಹರಿಸಲು ಕೆಳ ಅಂತಸ್ತಿನಲ್ಲಿ ತಂದೆ ಒಂದು ಆಫೀಸ್ ರೂಮನ್ನೂ ಹೊಂದಿದ್ದಾರಲ್ಲ.

ಋತು ಯೋಚಿಸತೊಡಗಿದಂತೆ ಅಲ್ಲೇ ನೆಲ ಒರೆಸುತ್ತಿದ್ದ ಸುಂದರಿ ಹೋಗಿ ಬಾಗಿಲು ತೆರೆದಿದ್ದಳು.

ಆದರೆ ಬಂದವಳು ಋತುವಿನ ಗೆಳತಿ ರಮ್ಯಾಳಾಗಿದ್ದಳು.

ಅವಳೂ ಜ್ಞಾನದೇಗುಲ ಕಾಲೇಜಿನಲ್ಲಿ ಜೀವಶಾಸ್ತ್ರದ ಅಧ್ಯಾಪಕಿಯಾಗಿ ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದಾಳೆ. ಆಕೆಯ ತಂದೆ ಚಿಕ್ಕಬಳ್ಳಾಪುರದ ಸಮೀಪದ ನಂದಿಯಲ್ಲಿ ಯೋಗಗುರುಗಳಾಗಿದ್ದಾರೆ. ಈ ಒಂದು ವರ್ಷದಲ್ಲಿ ಋತು ರಮ್ಯಾರ ನಡುವಿನ ಸ್ನೇಹ, ಆತ್ಮೀಯತೆ ನಿಕಟವಾಗಿದೆ. ಒಮ್ಮೊಮ್ಮೆ ರಮ್ಯ ಕೋಟೆಬಂಗಲೆಗೆ ಬಂದರೆ, ಋತುವೂ ಆಗಾಗ ರಮ್ಯಾಳ ಪಿ.ಜಿ.ಗೆ ಹೋಗಿಬರುತ್ತಾಳೆ.

ಋತುವಿನಂತೆಯೇ ಎತ್ತರದ ನಿಲುವು....ಸಾದುಗಪ್ಪಾದರೂ ಲಕ್ಷಣವಾಗಿದ್ದಳು. ಚೂಡಿದಾರ್ ಧರಿಸಿಕೊಂಡಿದ್ದವಳು ಉದ್ದ ಜಡೆಯನ್ನು ಸಡಿಲವಾಗಿ ಹೆಣೆದುಕೊಂಡಿದ್ದಳು.

ಓ....ಬಾಮ್ಮಾ ರಮ್ಯಾ....ಹೇಗಿದ್ದಿ?....

ಮಗಳ ಗೆಳತಿಯನ್ನು ಪುರುಷೋತ್ತಮರು ಸ್ವಾಗತಿಸಿದರು. ನಿಶ್ಯಬ್ದವೆಂದರೆ ಹೆದರುವ ಮಗುವಿನಂತಹ ಋತುವಿಗೆ ರಮ್ಯಾಳ ಗೆಳೆತನವಾದ ಮೇಲೆಯೇ ಮುಖದಲ್ಲಿ ಮಂದಹಾಸ ಮೂಡಿದ್ದು ಹೌದಲ್ಲ. ಮಗ ಭರತ ಬಂಗಲೆಯ ಮೂಲೆ ಸೇರಿದ ಮೇಲೆ ಸಂತೋಷವನ್ನೇ ಕಳೆದುಕೊಂಡಿದ್ದ ಮಗಳು ಗೆಳತಿ ರಮ್ಯಾಳಿಂದ ಅದನ್ನು ಮತ್ತೆ ಪಡೆದುಕೊಂಡಿದ್ದಳು.

ಚೆನ್ನಾಗಿದ್ದೀನಿ ಅಂಕಲ್, ನೀವೆಲ್ಲಾ ಹೇಗಿದ್ದೀರಿ?....ಮಾತನಾಡುತ್ತಲೇ ಕುಳಿತುಕೊಂಡ ರಮ್ಯಾಳಿಗೂ ಕಲಾವತಿ ಉಪಹಾರ ತಂದಿತ್ತರು. ರಮ್ಯ ಸಂಕೋಚದಿಂದ ಬೇಡವೆಂದರೆ ಅವರು ಕೇಳಬೇಕಲ್ಲ.

ನಿಮ್ಮ ಪಿ.ಜಿ.ಯಲ್ಲಿ ಊಟ ತಿಂಡಿ ಎಷ್ಟು ಚೆನ್ನಾಗಿರುತ್ತೆ ಅಂತ ನಂಗೊತ್ತಿಲ್ವಾ, ನಾನೂ ನಿನ್ನ ತಾಯಿ ಇದ್ದ ಹಾಗೆ, ಏನೂ ಸಂಕೋಚಪಡ್ದೆ ತಿಂಡಿ ತಿನ್ನು ರಮ್ಯ...

ಕಲಾವತಿ ಉಪಚರಿಸಿದಾಗ ರಮ್ಯ ಮರುಮಾತಾಡದೆ ತಿಂಡಿ ತಿನ್ನತೊಡಗಿದ್ದಳು. ಆಕೆಯ ಪ್ರೀತಿ ಸತ್ತು ಸ್ವರ್ಗ ಸೇರಿರುವ ತಾಯಿಯ ಪ್ರೀತಿಯನ್ನು ನೆನಪಿಸತೊಡಗಿದಾಗ ಗಂಟಲುಬ್ಬಿ ಬಂದಿತು ಅವಳಿಗೆ.

ಪುರುಷೋತ್ತಮರು ಬೆಂಗಳೂರಿನಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳ ಬಗ್ಗೆ ಮಾತನಾಡತೊಡಗಿದ್ದರು.

ಇಂಥ ರಾಕ್ಷಸೀ ಕೃತ್ಯಗಳು ಇತ್ತೀಚೆಗೆ ಜಾಸ್ತಿಯಾಗ್ತಿವೆ, ಒಂದು ಎರಡು ವರ್ಷದ ಹೆಣ್ಣುಮಗುವಿನ ಮೇಲೆ, ವಯಸ್ಸಾದ ವೃದ್ಧೆಯ ಮೇಲೆ ಅತ್ಯಾಚಾರ, ವೃದ್ಧ ದಂಪತಿಗಳ, ಒಂಟಿ ಮಹಿಳೆಯರ ಕಗ್ಗೊಲೆ, ಸರಗಳ್ಳತನ, ಒಂದೇ ಎರಡೇ....ಮನುಷ್ಯನಲ್ಲಿ ದಿನದಿಂದ ದಿನಕ್ಕೆ ಪಾಪಪ್ರಜ್ಞೆ ಕಡಿಮೆಯಾಗ್ತಿದೆ, ಪರಿಣಾಮ....ಅಪರಾಧಗಳು ಹೆಚ್ಚಾಗ್ತಿವೆ, ಝಣ ಝಣ ಕಾಂಚಾಣದ ಕುದುರೆಯ ಹಿಂದೆ ಹುಚ್ಚು ಓಟ ಅಷ್ಟೇ....

ಪುರುಷೋತ್ತಮರ ಮಾತುಗಳು ಇಂದಿನ ಸ್ಥಿತಿಗತಿಗಳಿಗೆ ಕನ್ನಡಿ ಹಿಡಿದಂತಿತ್ತು. ಯಾರೊಬ್ಬರೂ ಮಾತನಾಡಲಿಲ್ಲ.

ಏನಂತಾನೆ ನಿಮ್ಮ ಬಂಗಲೆಯ ಸೈಲೆಂಟ್ ಪ್ರಿನ್ಸ್ ಭರತ....

ಪರಿಸ್ಥಿತಿಯ ಗಂಭೀರತೆಯನ್ನು ತಿಳಿಮಾಡಲು ಅಲ್ಲೇ ತಲೆಬಗ್ಗಿಸಿ ತಿಂಡಿ ತಿನ್ನುತ್ತಿದ್ದ ಭರತನತ್ತ ನೋಡುತ್ತಾ ಕೇಳಿದಳು ರಮ್ಯ.

ನೀನೇ ಹೇಳಿದ್ಯಲ್ಲ ಸೈಲೆಂಟ್ ಪ್ರಿನ್ಸ್ ಅಂತ, ಅವ್ನಿನ್ನು ಏನು ಹೇಳ್ತಾನೆ ಬಿಡು ರಮ್ಯ...

ಕಲಾವತಿ ಸಹಜವಾಗಿ ಮಾತನಾಡಿದರೂ ಅದರಲ್ಲಿ ಅಡಗಿದ್ದ ನೋವಿನ ಧ್ವನಿಯನ್ನು ಗುರುತಿಸಿದ ರಮ್ಯಳಿಗೆ ತಾನು ಹಾಗೆ ಮಾತನಾಡಬಾರದಿತ್ತೆನಿಸಿತು.

ಉಪಾಹಾರ ಮುಗಿದ ಮೇಲೆ ಪುರುಷೋತ್ತಮರು ಸಂಜೆಯವರೆಗೂ ರಮ್ಯಳಿಗೆ ಬಂಗಲೆಯಲ್ಲಿರುವಂತೆ ಹೇಳಿ ಕೇಸೊಂದನ್ನು ಪರಿಶೀಲಿಸಲು ತಮ್ಮ ಆಫೀಸ್ ರೂಮಿನತ್ತ ನಡೆದರೆ ಕಲಾವತಿ ಅಡುಗೆಮನೆಯತ್ತ ನಡೆದರು. ಭರತ ಹಾಲಿನಲ್ಲಿರುವ ದೊಡ್ಡ ಅಕ್ವೇರಿಯಂನ ಮುಂದೆ ಕುಳಿತು ಬಂಗಾರದ ಬಣ್ಣದ ಜೋಡಿ ಮೀನುಗಳನ್ನು ನೋಡತೊಡಗಿದ್ದ.

ನೋಡಿದ್ಯಾ ರಮ್ಯಾ, ಇದೇ ಇಲ್ಲಿನ ಅಂತ ಮೌನ ಸಾಮ್ರಾಜ್ಯ, ನಂಗಂತೂ ಇಲ್ಲಿನ ನಿಶ್ಯಬ್ದ ಒಮ್ಮೊಮ್ಮೆ ಹುಚ್ಚು ಹಿಡಿಸಿದಂತಾಗುತ್ತೆ, ಈ ಬಂಗ್ಲೆಗೆ ಉನ್ನತಿ ಅಂತ ಹೆಸರಿಡೋ ಬದ್ಲು ಮೌನಮಂಟಪ ಅಂತ ಹೆಸರಿಡಬೇಕಿತ್ತು ಅಂತ ಅನ್ಸುತ್ತೆ ಒಮ್ಮೊಮ್ಮೆ, ಯಾಕೇಂದ್ರೆ ಭರತ, ಸುಂದರಿ...ಹೀಗೆ ಈ ಮೌನಮಂಟಪದ ಸದಸ್ಯರ ಸಂಖ್ಯೆ ಬೆಳೆಯುತ್ತಾ ಹೋಗ್ತಿದೆಯಲ್ಲ....ಚಿಕ್ಕಮ್ಮನ ಮಾತುಗಳು, ಹಕ್ಕಿಗಳ ಕಲರವ ನನ್ನ ಇನ್ನೂ ಜೀವಂತವಾಗಿಟ್ಟಿದೆ ಅನ್ಸುತ್ತೆ....

ರಿಲ್ಯಾಕ್ಸ್ ಋತು, ಹೀಗೆ ಸಣ್ಣ ಪುಟ್ಟ ವಿಷಯಕ್ಕೆಲ್ಲಾ ಇಷ್ಟು ನರ್ವಸ್ ಆಗ್ಬೇಡ, ಎಲ್ಲರೂ ಸರಿಯಾಗೇ ಇದ್ದಾರೆ, ಅವರವರ ಸ್ವಭಾವಕ್ಕೆ ಸರಿಯಾಗಿ ಅವರಿದ್ದಾರೆ ಅಂದುಕೊಂಡ್ರೆ ಯಾವ ಟೆನ್ಷನ್ನೂ ಇರಲ್ಲ....

ರಮ್ಯಾಳೆಂದಾಗ ಅವಳನ್ನೇ ಮೆಚ್ಚುಗೆಯಿಂದ ನೋಡಿದಳು ಋತು. ನಿಜವೇ....ರಮ್ಯ ಈ ಒಂದು ವರ್ಷದಲ್ಲಿ ತನ್ನ ಜೀವನದಲ್ಲಿ ಗೆಳತಿಯಾಗಿ ಬಂದ ಮೇಲೆ ತಾನೆಷ್ಟೋ ಸುಧಾರಿಸತೊಡಗಿದ್ದೇನೆ ಎನಿಸತೊಡಗಿತು.

ಅವಳಿಗೆ ಫಕ್ಕನೆ ತಾನು ಬೆಳಿಗ್ಗೆ ಕಂಡ ಆ ಹೊಸ ಜೋಡಿ ಹಕ್ಕಿಗಳ ನೆನಪಾಯಿತು. ಅದನ್ನು ಗೆಳತಿಗೆ ತೋರಿಸಬೇಕೆನಿಸಿತು. ಅವಳ ಕೈ ಹಿಡಿದುಕೊಂಡೇ ತನ್ನ ರೂಮಿಗೆ ಬಂದು ಸದ್ದಿಲ್ಲದೆ ಬಾಲ್ಕನಿಯ ಬಾಗಿಲನ್ನು ತೆರೆದಳು. ಆ ಹಕ್ಕಿಗಳು ಅದೇ ರೀತಿ ಚಿಲಿಪಿಲಿಗುಟ್ಟುತ್ತಾ ಪೊಟರೆಯ